ಶಿವಮೊಗ್ಗ ಡಿವೀಜ್ಯ ಸೆಂಟ್ರಲ್ ರಿಕಾರ್ಡ್ ಆಫೀಸ್.

ರಿಕಾರ್ಡುಗಳನ್ನು ನಾಶಪಡಿಸುವಿಕೆ.

ಶಿವಮೊಗ್ಗ, ತಾರೀಖು 19ನೆ ಫೆಬ್ರವರಿ 1909.

ಮೈಸೂರು ಚೀಫ್ ಕೋರ್ಟ್ 1905ನೆ ಇಸವಿ ಸೆಪ್ಟಂಬರು 26ನೆ ಮಾರ್ಕಂ 122ನೆ ನಂಬರು ರೂಲ್ಸು ಆಫ್ ಪ್ರಾಕ್ಟಿಸ್ ಅನುಸರಿಸಿ ಇದರಿಂದ ಸಮಸ್ತರಿಗು ತಿಳಿಯಪಡಿಸುವದೇನಂದರೆ—.

ಈ ಡಿವೀಜನ್ನಿಗೆ ಸೇರಿದ ಸಿವಿಲ್ ಕೋರ್ಟುಗಳಲ್ಲಿ 1905ನೆ ಇಸವಿ ಜುಲೈ 1ನೆ ತಾರೀಖು ಲಾಗಾಯಿತು 1906ನೆ ಇಸವಿ ಜೂನ್ 30ನೆ ತಾರೀಖಿನ ವರಿಗೆ ದಾಖಲಾದ ಈ ಕೆಳಗೆ ವಿವರಿಸಿ ಇರುವ ಮೊಕದ್ದಮೆಗಳ ಪೈಕಿ ಫೈಸಲಾದವುಗಳಲ್ಲಿ ಕಕ್ಷಿಗಾರರಿಂದ, ಲೂ ಮತ್ತು ಸಾಕ್ಷಿಗಳಿಂದಲೂ ಸಹಾ ಹಾಜರ್ಮಾಡಲ್ಪಟ್ಟ ವಿಶಿಷ್ಟ ದಸ್ತೈವಜುಗಳು ಮೊದಲ ವಾಪಸು ತೆಗದುಕೊಳ್ಳಲ್ಪಡದೆ ಇದ್ದ. ಪಕ್ಷದಲ್ಲಿ ಮೇಲ್ಕಂಡ ರೂಲ್ಸು ಆಫ್ ಪ್ರಾಕ್ಟಿಸ್‌ನಲ್ಲಿ ಉದಹರಿಸಿರುವ ವಾಯಿದೆ ನಂತರ ನಾಶಪಡಿಸಲ್ಪಡುತ್ತವೆ ತಿಳಿಯುವದು ಅಂದರೆ ಫೈಸಲಾದ ಮೂರು ವರುಷದ ವಳಗೆ.

ಕೋರ್ಟುಗಳ ಹೆಸರು.	ಯಾ ಸಾಲು.	ಮೊಕದ್ದಮೆಗಳ ಸ್ವಭಾವ.			
		ಸಿವಿಲ್ ಸೂಟುಗಳು.	ಅಮಲ್ದಾರಿ.	ಮಿಸಲೇನಿಯಸ್.	ಅಪೀಲು.
ಶಿವಮೊಗ್ಗ ಡಿಸ್ಟ್ರಿಕ್ಟು ಕೋರ್ಟು.	1905—1906	1ರ ಲಾ|| 3ರ ವರಿಗೆ	1ರ ಲಾ|| 28ರ ವರಿಗೆ	1ರಲಾ||226ರ ವರಿಗೆ	1ರ ಲಾ||215ರ ವರಿಗೆ
ಶಿವಮೊಗ್ಗ ಸಬ್ ಜಡ್ಜಿ ಕೋರ್ಟು.		1ರಿಂದ 154	1ರಿಂದ 124	1ರಿಂದ 100	1ರಿಂದ 212
ಶಿವಮೊಗ್ಗ ಮುನ್ಸೀಫ್ ಕೋರ್ಟು.		1ರಿಂದ 920	1ರಿಂದ 1620	1ರಿಂದ 1062	ಡಿಟೋ
ಚಿತ್ರದುರ್ಗ ಮುನ್ಸೀಫ್ ಕೋರ್ಟು.		1ರಿಂದ 1430	1ರಿಂದ 1696	1ರಿಂದ 1061	ಡಿಟೋ
ಸಾಗರ ಮುನ್ಸೀಫ್ ಕೋರ್ಟು.		1ರಿಂದ 540	1ರಿಂದ 910	1ರಿಂದ 660	ಡಿಟೋ
ಚಿಕ್ಕಮಗಳೂರು ಮುನ್ಸೀಫ್ ಕೋರ್ಟು.		1ರಿಂದ 705	1ರಿಂದ 993	1ರಿಂದ 662	ಡಿಟೋ
ಲೇಟ ಎಡೆಹಳ್ಳಿ ಮುನ್ಸೀಫ್ ಕೋರ್ಟು.		1ರಿಂದ 427	1ರಿಂದ 620	1ರಿಂದ 425	ಡಿಟೋ

ಆರ್. ಬಿ. ಪ್ಲಮ್ಮರ್, ಆಫೀಸರ ಇನ್ ಛಾರ್ಜ್ ಸೆಂಟ್ರಲ್ ರಿಕಾರ್ಡ್, ಶಿವಮೊಗ್ಗ ಡಿವಿಜ್ಯ.

ಬೆಂಗಳೂರು ಸಬ್ ಜಡ್ಜಿಯವರ ಕೋರ್ಟಿನಲ್ಲಿ.

ಸ್ಯ 1908—09ನೆ ಇಸವಿ ಮಿ|| ಅರ್ಜಿ ನಂಬರ್ 728.

ಮಾಗಡಿ ರೇಂಜಿನಲ್ಲಿ ಸಬ್ ಇನ್‌ಸ್ಪೆಕ್ಟರಾಗಿದ್ದು ಬೆಂಗಳೂರು ವಿಕ್ಟೋರೀಯಾ ಆಸ್ಪತ್ರೇಲಿ ಫವತಿಪಟ್ಟ ಎ. ಸುಬ್ಬರಾಯರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಬೆಂಗಳೂರು ಕೋರ್ಟಿಲಿ ಬಿ. ಸ್ಟ್ರೀಟಿನಲ್ಲಿ ಇರುವ ಫವತಿ ಸುಬ್ಬರಾಯರ ಹೆಂಡತಿ ಕೃಷ್ಣಮ್ಮ, ಮೃತಪಟ್ಟ ಸದರೀ ಎ. ಸುಬ್ಬರಾಯರಿಗೆ ಖಾಯಂ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರಲ್ಲಿ ವಾಸಸ್ಥರಾಗಿ ಮೃತಪಟ್ಟ ಸುಬ್ಬರಾಯರ ಜಿಂದಗಿ ಬಗ್ಗಾಗಿ ಬರತಕ್ಕ 308 ರೂಪಾಯಿಗಳನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಕೃಷ್ಣಮ್ಮನ ಅರ್ಜಿಯನ್ನು ಸ್ಯ 1909ನೆ ಇಸವಿ ಮಾರ್ಚಿ 12ನೆ ತಾರೀಖಿನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸುಬ್ಬರಾಯರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ಯ 1909ನೆ ಇಸವಿ ಫೆಬ್ರವರಿ 19ನೆ ತಾರೀಖಿನಲ್ಲಿ ಕೋರ್ಟು ಮೊಹರನಿಶಿ ನಮ್ಮ ದಸಖತ್ತೊಡನೆ ಕೊಡೋಣವಾಗಿದೆ.

ಟಿ. ಇ. ಜಯರಾಮ್ಮಯರ್, ಸಬ್ ಜಡ್ಜ್.

ಮೈಸೂರು ಗವರ್ನಮೆಂಟು ಕೋ ಆಪರೇಟೀವ್ ಸೊಸೈಟಿಗಳ ರಿಜಿಸ್ಟ್ರಾರ್‌ವರ ಆಫೀಸ್.

ನೋಟಿಫಿಕೇಷನ್ ನಂಬರ್ 511-C. S. 24—ಬೆಂಗಳೂರು, ತಾರೀಖು 23-24ನೆ ಫೆಬ್ರವರಿ 1909ನೆ ಇಸವಿ.

ಈ ಕೆಳಗೆ ನಮೂದಿಸಿರುವ ಕೋ ಆಪರೇಟಿವ್ ಸೊಸೈಟಿಗಳು 1905ನೆ ಇಸವಿಯ ಮೈಸೂರು ಕೋ ಆಪರೇಟಿವ್ ಸೊಸೈಟಿಗಳ ರೆಗ್ಯುಲೇಷನ್ 6ನೆ ಸೆಕ್ಷನ್ (2)ನೆ ಬಳ ಪ್ರಕರಣಕ್ಕನುಸಾರವಾಗಿ ರಿಜಿಸ್ಟರು ಮಾಡಲ್ಪಟ್ಟಿರುತ್ತವೆ :—

	ಹೆಸರು.	ಸ್ಥಳ.	ರಿಜಿಸ್ಟರಾದ ತಾರೀಖು.
1.	ಶ್ರೀ ಹರಿಹರೇಶ್ವರ ಕೋ ಆಪರೇಟೀವ್ ಸೊಸೈಟಿ, ಲಿಮಿಟೆಡ್.	ಹರಿಹರ.	10ನೆ ಫೆಬ್ರವರಿ 1909ನೆ ಇಸವಿ.
2.	ಕೋಲಾರ ಕೋ ಆಪರೇಟೀವ್ ಸೊಸೈಟಿ, ಲಿಮಿಟೆಡ್.	ಕೋಲಾರ.	10ನೆ ಫೆಬ್ರವರಿ 1909ನೆ ಇಸವಿ.

ಎಂ. ಶಾಮರಾವ್, ಮೈಸೂರು ಗವರ್ನಮೆಂಟ್ ಕೋ ಆಪರೇಟೀವ್ ಸೊಸೈಟಿಗಳ ರಿಜಿಸ್ಟ್ರಾರ್.